2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

**ಸತ್ರ ಮೊಕದ್ದಮೆ ನಂಃ 105/2019**

| | | |
|---|---|---|
| ಸಾಕ್ಷಿದಾರರ ಹೆಸರು | - ರಂಗಪ್ಪ | ಪಿಡಬ್ಲೂ - 3 |
| ತಂದೆಯ ಹೆಸರು | - ಸಣ್ಣ ಗುರುವ ಭೋವಿ | ಸಿಡಬ್ಲೂ - 3 |
| ವಯಸ್ಸು | - 55 ವರ್ಷ | |
| ಉದ್ಯೋಗ | - ವ್ಯವಸಾಯ | |
| ವಾಸ ಸ್ಥಳ | - ಬುಕ್ಕಂಬುಾದಿ | |

ದಿನಾಂಕಃ 13-06-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

1. ಆರೋಪಿತರನ್ನು ನೋಡಿದ್ದೇನೆ ಅವರು ನಮ್ಮ ಊರಿನವರು ಆದರೆ ಅಷ್ಟಾಗಿ ಪರಿಚಯವಿಲ್ಲ. ಸಹ ಪಂಚನಾದ ಚಾಸಾ.2 ಗೊತ್ತು. ಪಿರ್ಯಾದಿ ಮತ್ತು ಮೃತ ಲತಾ ಗೊತ್ತಿಲ್ಲ.

2. ಸಾಕ್ಷಿಯು ನಿಪಿ.29 ನೋಟೀಸು ಮತ್ತು ನಿಪಿ.23 ಪಂಚನಾಮೆಯಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ.23(ಇ) ಮತ್ತು ನಿಪಿ.23(ಎಫ್) ಮತ್ತು ನಿಪಿ.29(ಬಿ) ಎಂದು ಗುರುತಿಸಲಾಯಿತು. ಈಗ್ಗೆ ಮೂರು ವರ್ಷಗಳ ಹಿಂದೆ ಬುಕ್ಕಾಂಬೂದಿಯಲ್ಲಿರುವ ನಮ್ಮ ಮನೆಯ ಕಟ್ಟೆಯ ಮೇಲೆ ಕುಳಿತಿದ್ದೆನು. ಆಗ ಪೊಲೀಸರು ಅಲ್ಲಿಗೆ ಬಂದು ಮೂರನೇ ಆರೋಪಿಯ ಮನೆಯಲ್ಲಿ ಹುಡುಗಿ ಮೃತ ಪಟ್ಟಿದ್ದಾಳೆ ಎಂದು ಹೇಳಿ ತಾವು ಅಲ್ಲಿಗೆ ಬಂದಿರುವುದಕ್ಕೆ ಸಾಕ್ಷಿಗೆ ಸಹಿ ಮಾಡುವಂತೆ ಹೇಳಿದ್ದರಿಂದ ನಾನು ಸದರಿ ಸಹಿಗಳನ್ನು

ಮಾಡಿದ್ದೇನೆ. ಅದನ್ನು ಹೊರತುಪಡಿಸಿ ನನಗೆ ಬೇರೆ ಏನು ಗೊತ್ತಿಲ್ಲ.

3. ಪೊಲೀಸರು ಪಂಚನಾಮೆಗೆ ಸಹಕರಿಸುವಂತೆ ನನಗೆ ಯಾವುದೇ ನೋಟೀಸನ್ನು ನೀಡಿಲ್ಲ ಮತ್ತು ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ ಮತ್ತು ಏನನ್ನು ಅಮಾನತುಪಡಿಸಿಕೊಂಡಿಲ್ಲ. ನಿಪಿ.23 ಮತ್ತು 29 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ಸಾಕ್ಷಿಯು ನಿಪಿ.24 ಫೋಟೋದಲ್ಲಿ ಆತನ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಫೋಟೋವನ್ನು ಎಲ್ಲಿ ಯಾವಾಗ ತೆಗೆಯಲಾಗಿತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಫೋಟೋದಲ್ಲಿರುವ ಮೊಬೈಲ್ ಯಾರಿಗೆ ಸೇರಿದ್ದು ಮತ್ತು ಅದನ್ನು ಯಾರು ಹಾಜರುಪಡಿಸಿದರು ಎಂದು ನನಗೆ ಗೊತ್ತಿಲ್ಲ. ಸದರಿ ಫೋಟೋದಲ್ಲಿ ನನ್ನನ್ನು ಹೊರತುಪಡಿಸಿ ಬೇರೆ ಯಾರೆಲ್ಲಾ ಇದ್ದಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿರುವ ಮೊಬೈಲ್ ನ ಮೇಲೆ ಅಂಟಿಸಲಾಗಿರುವ ಚೀಟಿಯ ಮೇಲೆ ಇರುವ ಆತನ ಸಹಿಯನ್ನು ನೋಡಿ ಗುರುತಿಸಿ ಅದನ್ನು ಸಹ ನಮ್ಮ ಮನೆಯ ಬಳಿ ಮಾಡಿದ್ದೇನೆ ಆದರೆ ಯಾವುದೇ ಮೊಬೈಲ್ ಮೇಲೆ ಅಂಟಿಸಿದ್ದ ಚೀಟಿಯ ಮೇಲೆ ನಾನು ಸಹಿ ಮಾಡಿಲ್ಲ ಎಂದು ನುಡಿದಿರುತ್ತಾರೆ. ನಿಪಿ.25 ರಂತೆ ಗುರುತಿಸಲಾಗಿರುವ ಡ್ರಾಯಿಂಗ್ ಬುಕ್ ನ್ನು ತೋರಿಸಲಾಗಿ

ಸಾಕ್ಷಿಯು ಆ ರೀತಿ ಯಾವುದೇ ಬುಕ್ ನ್ನು ಪೊಲೀಸರು ನನ್ನ ಸಮಕ್ಷಮ ವಶಪಡಿಸಿಕೊಂಡಿಲ್ಲ ಎನ್ನುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>

4. ದಿನಾಂಕಃ 21.04.2019 ರಂದು ಪೊಲೀಸರು ಬುಕ್ಕಂಬೂದಿಯ ಸಿದ್ದಲಿಂಗೇಶ್ವರ ಕಾಲೋನಿಯ 3 ನೇ ಆರೋಪಿಯ ಮನೆಯಲ್ಲಿ ಪಂಚನಾಮೆಯನ್ನು ಜರುಗಿಸಲು ಪಂಚರಾಗಿ ಹಾಜರಿರುವಂತೆ ನಿಪಿ.29 ರಂತೆ ನನಗೆ ಪೊಲೀಸರು ನೋಟೀಸನ್ನು ನೀಡಿದ್ದರು ಎಂದರೆ ಸರಿ.

5. ಅದರ ಮೇರೆಗೆ ನಾನು ಬೆಳಿಗ್ಗೆ 11.30 ಗಂಟೆಗೆ ಸದರಿ 3 ನೇ ಆರೋಪಿಯ ಮನೆಗೆ ಹೋದೆನು ಎಂದರೆ ಸಾಕ್ಷಿ ಪೊಲೀಸರು ಅಲ್ಲಿಗೆ ಬರುವ ಮೊದಲೇ ಅಲ್ಲಿಗೆ ಹೋಗಿ ನೋಡಿಕೊಂಡು ಬಂದಿದ್ದೆನು ನಂತರ ಅಲ್ಲಿಗೆ ಹೋಗಿಲ್ಲ ಎನ್ನುತ್ತಾರೆ. ಆಗ ಸದರಿ ಮನೆಯಲ್ಲಿ ಲತಾಳು ಮಲಗುವ ಕೋಣೆಯಲ್ಲಿ ಹಾಜರಿದ್ದ ಮೃತಳ ತಂದೆಯಾದ ಚಾಸಾ.1 ಗಿರೀಶ್ ರವರು ಸದರಿ ಸ್ಥಳದಲ್ಲಿ ಆತನ ಮಗಳಾದ ಲತಾ ನೇಣು ಹಾಕಿಕೊಂಡು ಮೃತಪಟ್ಟಿರುವುದಾಗಿ ತಿಳಿಸಿದ ಮೇರೆಗೆ ಪೊಲೀಸರು ನನ್ನ ಮತ್ತು ಸಹ ಪಂಚರಾದ ಚಾಸಾ.2 ರವರ ಸಮಕ್ಷಮ ಬೆಳಿಗ್ಗೆ 11.30 ರಿಂದ 1.30 ರವರೆಗೆ ನಿಪಿ.23 ರಂತೆ ಪಂಚನಾಮೆಯನ್ನು ಜರುಗಿಸಿ ಸ್ಥಳದಲ್ಲಿಯೇ ನನ್ನ ಸಹಿಯನ್ನು ಪಡೆದುಕೊಂಡರು

ಎಂದರೆ ಸರಿಯಲ್ಲ. ಸದರಿ ಪಂಚನಾಮೆಯ ಕಾಲಕ್ಕೆ ಸದರಿ ಕೋಣೆಯ ಕಡಪ ಕಲ್ಲಿನ ಮಂಚದ ಮೇಲೆ ಇದ್ದ ಒಂದು ಪುಸ್ತಕ ಮತ್ತು ಒಂದು ಮೊಬೈಲ್ ನ್ನು ಪಿರ್ಯಾದಿ ಹಾಜರುಪಡಿಸಿದ್ದು ಸದರಿ ಪುಸ್ತಕ ಡ್ರಾಯಿಂಗ್ ಪುಸ್ತಕವಾಗಿದ್ದು ಅದರ ಮೇಲೆ Ben 10 ಡ್ರಾಯಿಂಗ್ ಬುಕ್ ಎಂದು ಪ್ರಿಂಟ್ ಹಾಕಲಾಗಿದ್ದು ಮೊದಲನೇ ಪುಟದಲ್ಲಿ Hip hip hurray ಎಂದು ಪ್ರಿಂಟ್ ಹಾಕಲಾಗಿದ್ದು, ಸದರಿ ಪುಸ್ತಕದಲ್ಲಿ ಒಟ್ಟು 16 ಪುಟಗಳು ಇದ್ದು , 16 ನೇ ಪುಟದಲ್ಲಿ " Dharmu I am really sorry, ನಾನಗೆ ಅಂತ ಯಾರು ಇಲ್ಲ ಅದಕ್ಕೆ ನಾನು ಆತ್ಮ ಆತ್ಯೆ ಮಾಡಿಕೊಳ್ಳತ ಇದೆನೆ ನಾನ್ನ ಸಾವಿವೆ ನಾನ್ನೆ ಕಾರಣ ಇಂತಿ ಲತಾ ಧರ್ಮರಾಜ್ (Latha)" ಎಂದು ಬರೆದಿದ್ದ ಪುಸ್ತಕವನ್ನು ಮತ್ತು ಮೊಬೈಲ್ ಐಟೆಲ್ ಕಂಪೆನಿಯ Key Pad ಮೊಬೈಲ್ ನ್ನು ಪ್ರತ್ಯೇಕವಾಗಿ ಪ್ಲಾಸ್ಟಿಕ್ ಕವರ್ ಗೆ ಹಾಕಿ ಬಿಳಿಯ ಬಟ್ಟೆಯ ಚೀಲದಲ್ಲಿ ಇಟ್ಟು ಹೊಲೆದು 'ಪಿ' ಎಂಬ ಅಕ್ಷರದಿಂದ ಸೀಲು ಮಾಡಿ ಅದರ ಮೇಲೆ ನನ್ನ ಸಹಿಯನ್ನು ಪಡೆದು ವಶಪಡಿಸಿಕೊಂಡರು ಎಂದರೆ ಸರಿಯಲ್ಲ.

6. ಆ ದಿನ ಪೊಲೀಸರು ನನ್ನ ಸಮಕ್ಷಮ ನಿಪಿ.25 ಡ್ರಾಯಿಂಗ್ ಬುಕ್ ಮತ್ತು ಮು.ಮಾ.1 ಮೊಬೈಲ್ ನ್ನು ವಶಪಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಿಪಿ.29 ರಂತೆ ನೋಟೀಸನ್ನು ಪಡೆದು ನಿಪಿ.23 ರಂತೆ ಪಂಚನಾಮೆಯನ್ನು ಜರುಗಿಸುವ ಕಾಲಕ್ಕೆ ಹಾಜರಿದ್ದು ಅದರಲ್ಲಿ ಬರೆದಿರುವ

ವಿಚಾರಗಳನ್ನು ತಿಳಿದುಕೊಂಡು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

7. ಪೊಲೀಸರು ನಿಮ್ಮ ಮತ್ತು ಚಾಸಾ.2 ರವರ ಸಮಕ್ಷಮ ನಿಪಿ.23 ರಂತೆ ಸ್ಥಳ ಪಂಚನಾಮೆಯನ್ನು ಜರುಗಿಸಿ ನಿಪಿ.25 ಮತ್ತು ಮು.ಮಾ.1 ನ್ನು ಅಮಾನತುಪಡಿಸಿಕೊಂಡಿದ್ದರೂ ಸಹ ಆರೋಪಿತರು ನಿಮ್ಮ ಊರಿನವರೇ ಆಗಿರುವ ಕಾರಣ ಅವರೊಂದಿಗೆ ಶಾಮೀಲಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಬಿ.ಎಂ.ಎಲ್.ಜಿ. ವಕೀಲರಿಂದಃ

8. ನಿಪಿ.23 ಮತ್ತು 29 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ಲತಾ ನೇಣು ಹಾಕಿಕೊಂಡು ಮೃತ ಪಟ್ಟಿದ್ದಾಳೆ ಎನ್ನುವ ಸಮಯದಲ್ಲಿ ಆರೋಪಿತರು ಶಿವನಿಯಲ್ಲಿ ವಾಸವಾಗಿದ್ದರು ಎಂದರೆ ನನಗೆ ಗೊತ್ತಿಲ್ಲ.

ಮರು ವಿಚಾರಣೆ ಇಲ್ಲಃ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ